# ‘ರಂಗ’ ಅಂದರೆ ಚಪ್ಪಾಳೆಯ ಉಡುಗೊರೆ



**ಡಾ. ಜಾನ್ವಿ ರಾಯಲ**
ಕಲರ್ಸ್ ಕನ್ನಡದ ‘ರಾಜಾ ರಾಣಿ’ ನಿರೂಪಕಿ

◆ **ನಿಮ್ಮ ಪರಿಚಯ ಹೇಳಿ.**

ನನ್ನ ಹೆಸರು ಡಾ. ಜಾನ್ವಿ ರಾಯಲ. ವೃತ್ತಿಯಿಂದ ದಂತ ವೈದ್ಯೆ. ಎರಡು ವರ್ಷದಿಂದ ಪೂರ್ಣ ಪ್ರಮಾಣದಲ್ಲಿ ನಟನೆ ಮತ್ತು ನಿರೂಪಣೆಯನ್ನೇ ಮಾಡುತ್ತಿದ್ದೇನೆ. ಡೆಂಟಲ್ ಇಂಟರ್ನ್‌ಶಿಪ್ ಮಾಡುವಾಗಲೇ ಬೆಳ್ಳಿತೆರೆಗೆ ಬಂದೆ. ಇದುವರೆಗೂ ಹದಿಮೂರು ಸಿನಿಮಾಗಳಲ್ಲಿ ಕೆಲಸ ಮಾಡಿದ್ದೇನೆ. ಟಿ.ಎಸ್. ನಾಗಾಭರಣ ಅವರ ‘ಕಾನೂರಾಯಣ’, ಸಂಚಾರಿ ವಿಜಯ್ ಜೊತೆ ‘6ನೇ ಮೈಲಿ’ಯಲ್ಲೂ ಕೂಡ ಕೆಲಸ ಮಾಡಿದ್ದೇನೆ. ಈಗ ‘ರಾಯಲ ಎಂಟರ್ ಪ್ರೈಸಸ್’ ನಿರ್ಮಾಣ ಸಂಸ್ಥೆ ಆರಂಭಿಸಿದ್ದೇವೆ. ಅದರ ಮೂಲಕವೇ ‘ಒಂದು ಸಿನಿಮಾ ಕಥೆ’ಯನ್ನು ಮಾಡುತ್ತಿದ್ದೇವೆ. ಇದಕ್ಕೂ ಮೊದಲು ಯೂಟ್ಯೂಬ್‌ನಲ್ಲಿ ನಿರೂಪಣೆ ಮಾಡುತ್ತಿದ್ದೆ. ಈಗ ‘ರಾಜಾ ರಾಣಿ’ಗೆ ಅವಕಾಶ ಸಿಕ್ಕಿದೆ.

‘ಮಿಸ್ ಕರ್ನಾಟಕ 2018’ ಗೆದ್ದಿದ್ದೆ. ತಂದೆ ಇಲ್ಲ. ಅಮ್ಮ ನಾಗವೇಣಿ (ಕೆಇಎಸ್) ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿ ಆಗಿದ್ದಾರೆ. ಅವರೇ ನನ್ನನ್ನು ಯಾವುದೇ ನಿರ್ಬಂಧ ಇಲ್ಲದಂತೆ ಬೆಳೆಸಿದ್ದಾರೆ. ಆಟ, ಹಾಡು, ನೃತ್ಯ ಹೀಗೆ ಏನನ್ನೇ ಕಲಿಯುತ್ತೇನೆ ಅಂದರೆ ಕಲಿಸಿದ್ದಾರೆ. ಪತಿ ಸತ್ಯ ರಾಯಲ ಅಮೆರಿಕದಲ್ಲಿ ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದರು. ಈಗ ಚಂದನವನದಲ್ಲಿ ನಿರ್ದೇಶಕರಾಗಿ ಹೆಜ್ಜೆಯನ್ನು ಊರುತ್ತಿದ್ದಾರೆ.

◆ **ಈ ಅವಕಾಶ ಸಿಕ್ಕಿದ್ದು ಹೇಗೆ?**

ಕಲರ್ಸ್ ಸಿನಿಮಾದಲ್ಲಿ ‘ಒಂದು ಸಿನಿಮಾ ಕಥೆ’ ನಿರ್ವಹಿಸುತ್ತಿದ್ದೆ. ಕಲರ್ಸ್ ಗ್ರೂಪಿನಿಂದ ‘ರಾಜಾ ರಾಣಿ’ಗೆ ನಿರೂಪಕರ ಹುಡುಕಾಟ ನಡೆದಿತ್ತು. ವಿಷಯ ತಿಳಿದು ನಾನೇ ಮಾಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದೆ. ಸಂದರ್ಶನ ರೂಪದಲ್ಲಿ ಆಡಿಷನ್ ಮಾಡಿ ಆಯ್ಕೆ ಮಾಡಿದರು. ಅದೃಷ್ಟವಶಾತ್ ಇಂತಹ ಒಂದು ಅವಕಾಶ ಸಿಕ್ಕಿದೆ. ಹಲವಾರು ಸಿನಿಮಾ ಮಾಡಿದ್ದರೂ ಜನ ನನ್ನನ್ನು ಗುರುತಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ಖಂಡಿತ ಆ ಮನ್ನಣೆ ಸಿಗುತ್ತದೆ ಎನ್ನುವ ಭರವಸೆ ಇದೆ.

◆ **ನಿರೂಪಣೆಗೆ ಯಾವ ರೀತಿಯ ತಯಾರಿಯನ್ನು ಮಾಡಿಕೊಂಡಿದ್ದೀರಿ?**

ಚಿಕ್ಕ ವಯಸ್ಸಿನಿಂದಲೂ ಗಾಯನ ನೃತ್ಯ ಅಂದರೆ ಇಷ್ಟ. ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ವಿಶೇಷ ಆಸಕ್ತಿ. ನನ್ನ ಪದವಿ ದಿನಗಳಲ್ಲಿ ಅನೇಕ ಕಾರ್ಯಕ್ರಮ ಸಂಘಟಿಸಿದ್ದೇನೆ. ಕಾಲೇಜಿನ ಎಲ್ಲ ಕಾರ್ಯಕ್ರಮಕ್ಕೂ ಮುಂದೆ ಇರ್ತಾ ಇದ್ದೆ. ಆಗಲೇ ಡಾನ್ಸ್ ಹಲವು ಪ್ರಕಾರಗಳನ್ನು ಕಲಿತೆ. ಮೂಲತಃ ಕ್ಲಾಸಿಕಲ್ ಡಾನ್ಸರ್ ಕೂಡ ಹೌದು. ಬಾಲ್ಯದಲ್ಲಿ ಡಾಕ್ಟರ್ ಆಗಬೇಕು ಎನ್ನುವುದು ನನ್ನ ಕನಸಾಗಿತ್ತು. ನಂತರ ನನ್ನ ಬೇರೆ ಆಸೆ ಕನಸಿಗೆ ರೆಕ್ಕೆಯನ್ನು ಕಟ್ಟುತ್ತಿದ್ದೇನೆ.

◆ **ಹೊಸತರಲ್ಲಿ ನಟನೆಯ ಜೀವನ ಹೇಗಿತ್ತು?**

ತುಂಬ ಕಷ್ಟ ಅಂತ ಅನ್ನಿಸಿತ್ತು. ಆಡಿಷನ್ ನೀಡುವಾಗ ನಾನೇ ವಿಶೇಷವಾಗಿ ತಯಾರಾಗಿ ಹೋಗುತ್ತಿದ್ದೆ. ಒಂದಾದ ಮೇಲೆ ಒಂದು ಅವಕಾಶ ಸಿಕ್ಕವು. ನಂತರ ‘ಬೆನಕ’ ತಂಡದಿಂದ ‘ಜೋಕುಮಾರಸ್ವಾಮಿ’ ನಾಟಕಕ್ಕೆ ಪ್ರಧಾನ ಪಾತ್ರ ನಿರ್ವಹಿಸುವ ಸಂದರ್ಭ ಬಂತು. ನಾಗಾಭರಣ ಎರಡೇ ವಾರದಲ್ಲಿ ತಯಾರಿ ಮಾಡಿದರು. ಅದರಿಂದ ಪರಿಪೂರ್ಣ ನಟಿ ಆಗುವ ನಿಟ್ಟಿನಲ್ಲಿ ಬೆಳೆದೆ. ಆ್ಯಂಕರ್ ಆಗಬೇಕು ಎಂದು ಯಾವತ್ತೂ ಯೋಚಿಸಿರಲಿಲ್ಲ. ತೆಲುಗು–ತಮಿಳಿನಿಂದ ಕನ್ನಡಕ್ಕೆ ಡಬ್ ಮಾಡ್ತಿನಿ. ಆಗ ಹೋಸ್ಟಿಂಗ್ ಮಾಡುವ ಚಿಂತನೆಯಲ್ಲಿ ಯೂಟ್ಯುಬ್ ಚಾನೆಲ್‌ನಲ್ಲಿ ಹಲವರ ಸಂದರ್ಶನಗಳನ್ನು ಆರಂಭಿಸಿದೆ. ಹೊಸತರಲ್ಲಿ ಅಲ್ಲಿ ತಪ್ಪು ಮಾಡುವುದು ಗೊತ್ತಾಗುತ್ತಿತ್ತು. ತಪ್ಪು ಮಾಡುತ್ತಲೇ ಏನಾದರೂ ಮಾಡಬೇಕು ಎನ್ನುವ ಸಂಕಲ್ಪದಿಂದ ಮುನ್ನಡೆದೆ.

◆ **ರಂಗದಿಂದ ನೇರವಾಗಿ ಪ್ರೇಕ್ಷಕರನ್ನು ಎದುರಿಸಿದ ಸಂದರ್ಭ ಹೇಗಿತ್ತು?**

ನಿಜಕ್ಕೂ ಅದು ಅದ್ಭುತ ಅನುಭವ. ಯಾವ ಡೈಲಾಗ್ ತಪ್ಪಬಾರದು ಎನ್ನುವ ಭಯ ಇತ್ತು. ಸಿನಿಮಾದಲ್ಲಿ ಮತ್ತೊಂದು ಟೇಕ್ ತೆಗೆದುಕೊಳ್ಳಬಹುದು. ರಂಗದ ಮೇಲೆ ಅದು ಸಾಧ್ಯವೇ ಇಲ್ಲ. ಪ್ರೇಕ್ಷಕ ಎದುರಿಗೆ ಇರುತ್ತಾನೆ. ಯಾವುದಾದರು ಒಂದು ದೃಶ್ಯ ಇಷ್ಟ ಆದ ತಕ್ಷಣ ಆತ ಚಪ್ಪಾಳೆಯ ಉಡುಗೊರೆ ಕೊಡುತ್ತಾನೆ. ಅದು ಇನ್ನೊಂದಿಷ್ಟು ಧೈರ್ಯವನ್ನು ನೀಡುತ್ತಿತ್ತು. ಇನ್ನೂ ಚೆನ್ನಾಗಿ ಮಾಡಬೇಕು ಎನ್ನುವ ಹುಮ್ಮಸ್ಸು ತುಂಬುತ್ತಿತ್ತು. ಆ ಅನುಭವವನ್ನೇ ಇಲ್ಲಿ ಪ್ರಯೋಗ ಮಾಡಬೇಕಿದೆ.

■ **ರಾಘವೇಂದ್ರ ಕೆ.**